Kristu Jayanti College
AUTONOMOUS Bengaluru
Accredited 'A' Grade by NAAC | Affiliated to Bangalore University

# KANNADA LITERARY CLUB
## vichara jayanti
## REPORT ON CHOMANADUDI (Book review )

**Title: ವಿಚಾರಜಯಂತಿ, ಕಾರಂತರ 'ಚೋಮನ ದುಡಿ', ಓದು ಮತ್ತು ಸಂವಾದ –2019**

Date: 19-01-2019

Classes Attended & **Number of beneficiaries: 80 students**

**Objective:** 'ವಿಚಾರಜಯಂತಿ', ಕಾರಂತರ 'ಚೋಮನ ದುಡಿ' ಓದು ಮತ್ತು ಸಂವಾದ ಪ್ರಮುಖ ಉದ್ದೇಶ ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಓದುವ ಹಾಗೂ ಬರೆಯುವ ಆಸಕ್ತಿಯನ್ನು ಉದ್ದೀಪನಗೊಳಿಸುವುದು. ಉತ್ತಮ ಗ್ರಂಥಗಳ ಅಧ್ಯಯನದಿಂದ ಯುವ ಮನಸುಗಳಿಗೆ ಮಹೋನ್ನತ ಸಂಸ್ಕೃತಿ ಪರಿಚಯವಾಗಿ ಆ ಮೂಲಕ ಮನಸು ಸಂಸ್ಕಾರಗೊಳ್ಳುತ್ತದೆ. ಇದರಿಂದ ಗೌರವಯುತವಾದ ಜೀವನ ಸಾಧ್ಯವಾಗುತ್ತದೆ.ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಅಡಗಿರುವ ಕ್ರಿಯಾಶೀಲತೆ ಹಾಗೂ ಸೃಜನ ಶಕ್ತಿಗೆ ಹೊಸ ದಿಕ್ಕನ್ನು ತೋರುವ ಮೂಲಕ ಅವರಲ್ಲಿ ಪುಸ್ತಕ ಓದುವ ಅಭಿರುಚಿ ವೃದ್ಧಿಸುವ ಸದುದ್ದೇಶದಿಂದ 'ಚೋಮನ ದುಡಿ', ಓದು ಮತ್ತು ಸಂವಾದ ಏರ್ಪಡಿಸಲಾಗುವುದು.

**Brief Write up on the Programme:**: 'ವಿಚಾರಜಯಂತಿ' 'ಚೋಮನ ದುಡಿ', ಓದು ಮತ್ತು ಸಂವಾದ, ಕಾರ್ಯಕ್ರಮವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಬಿಸಲಾಯಿತು, ಪ್ರೊ. ಚಂದ್ರಶೇಖರ್ ಎನ್ ಸ್ವಾಗತ ಕೋರಿದರು, ಬಸವರಾಜು ಅತಿಥಿಗಳನ್ನು ಪರಿಚಯಿಸಿದರು, ಪ್ರಾಸ್ತಾವಿಕ ನುಡಿಯನ್ನು ವಿಭಾಗದ ಮುಖ್ಯಸ್ಥರು ಮಾತಾಡಿದರು. ಶ್ರೀಯುತ ಲಕ್ಷಿನಾರಾಯಣಸ್ವಾಮಿ ,ಯುವ ಬರಹಗಾರರು,

ಇವರು ಸಂಪನ್ಮೂಲವ್ಯಕ್ತಿಗಳಾಗಿ ಉಪಸ್ಥಿತರಿದ್ದರು. ೦೫ ವಿದ್ಯಾರ್ಥಿ 'ಚೋಮನ ದುಡಿ' ಕಾದಂಬರಿಯ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿದರು. ಸಂಪನ್ಮೂಲ ವ್ಯಕ್ತಿಗಳು ಕಾದಂಬರಿ ಕುರಿತು ತಮ್ಮ ವಿಚಾರಗಳನ್ನು ಮಂಡಿಸಿದರು. ಭಾಗವಹಿಸಿದ್ದ ಎಲ್ಲಾ ವಿದ್ಯಾರ್ಥಿಗಳೊಂದಿಗೆ ಸಂವಾದ ಏರ್ಪಡಿಸಲಾಗಿತ್ತು. ಆ ಮೂಲಕ ವಿದ್ಯಾರ್ಥಿಗಳು ಪುಸ್ತಕದ ಬಗ್ಗೆ ಹೆಚ್ಚಿನ ವಿಚಾರಗಳನ್ನು ತಿಳಿದುಕೊಂಡರು. ವಂದನಾರ್ಪಣೆಯೊ0ದಿಗೆ ಕಾರ್ಯಕ್ರಮವನ್ನು ಸಮಾರೋಪಗೊಳಿಸಲಾಯಿತು.

Feedback: ವಿದ್ಯಾರ್ಥಿಗಳು ಆಸಕ್ತಿಯಿಂದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ್ದರು. 'ಚೋಮನ ದುಡಿ' ಕಾದಂಬರಿ ಓದು ಮತ್ತು ಸಂವಾದ ವಿಚಾರಜಯಂತಿ ವಿಚಾರಗೋಷ್ಠಿಯಲ್ಲಿ ಒಂದಷ್ಟು ಮಾಹಿತಿಯೊ0ದಿಗೆ ವಿಚಾರ ವಿನಿಮಯ ಜೊತೆಗೆ ವಿದ್ಯಾರ್ಥಿಗಳಲ್ಲಿ ಪುಸ್ತಕ ಓದುವ ಅಭ್ಯಾಸ ಬೆಳಸುವ ಆಶಯ ಮೂಡಿದ್ದು ಸಂತಸವೇ ಸರಿ.

ವರದಿ ಸಿದ್ಧಪಡಿಸಿದವರು

ಪ್ರೊ. ವೆಂಕಟೇಶಪ್ಪ. ಪಿ



ಕಾರ್ಯಕ್ರಮದಲ್ಲಿ ಸಂಪನ್ಮೂಲವ್ಯಕ್ತಿಗಳೊಂದಿಗೆ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು.



ಸಂಪನ್ಮೂಲವ್ಯಕ್ತಿಗಳು ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸುತ್ತಿರುವುದು.